**File No.DPAR/126/EGM/2020-DESK1-dparegovsec**

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕರ್ನಾಟಕ ಸರ್ಕಾರ ನೀಡುವ ಸೇವೆ/ಯೋಜನೆಗಳಿಗೆ ಅರ್ಜಿ ಸಲ್ಲಿಸುವ ಕರ್ನಾಟಕ ರಾಜ್ಯ ನಿವಾಸಿ ನಾಗರಿಕರಿಂದ ಕಡ್ಡಾಯವಾಗಿ ಕುಟುಂಬ ಗುರುತಿನ ಚೀಟಿ (ಪಡಿತರ ಚೀಟಿ ಸಂಖ್ಯೆ ) ಪಡೆಯುವ ಬಗ್ಗೆ.

ಓದಲಾಗಿದೆ :

1. ದಿನಾಂಕ : 05.07.2018ರಂದು ಮಂಡಿಸಲಾದ 2018-19ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 146
2. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ :ಸಿಆಸುಇ 254 ಇಜಿವಿ 2019, ದಿನಾಂಕ: 28.08.2019
3. ಸರ್ಕಾರದ ಸುತ್ತೋಲೆ ಸಂಖ್ಯೆ :ಸಿಆಸುಇ 126 ಇಜಿಎಂ 2020, ದಿನಾಂಕ : 29.05.2020
4. ಸರ್ಕಾರದ ಸುತ್ತೋಲೆ ಸಂಖ್ಯೆ :ಸಿಆಸುಇ 126 ಇಜಿಎಂ 2020, ದಿನಾಂಕ : 18.09.2020
5. ಸರ್ಕಾರದ ಆದೇಶ ಸಂಖ್ಯೆ :ಸಿಆಸುಇ 9 ಪಿಆರ್‌ಜೆ 2020, ದಿನಾಂಕ: 07.10.2020.
6. ಕುಟುಂಬ ಗುರುತಿನ ಯೋಜನೆ ಕುರಿತು ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 19.11.2020ರಂದು ನಡೆದ ಸಭೆಯ ನಡವಳಿ

ಪ್ರಸ್ತಾವನೆ :

ಮೇಲೆ ಓದಲಾದ (1)ರಂತೆ ಸರ್ಕಾರವು ತನ್ನ ಆಯವ್ಯಯ ಭಾಷಣದಲ್ಲಿ ಅರ್ಹತೆ ನಿರ್ವಹಣೆ ವ್ಯವಸ್ಥೆ ಮೂಲಕ ಅರ್ಹ ನಿವಾಸಿಗಳಿಗೆ ಅರ್ಜಿ ಸಲ್ಲಿಸದೆಯೇ ಸ್ವಯಂಚಾಲಿತವಾಗಿ ವಿವಿಧ ಯೋಜನೆ ಅಥವಾ ಸಬ್ಸಿಡಿ (ವಿನಾಯಿತಿ) ಸೌಲಭ್ಯ ನೀಡಲು ಪಡಿತರ ಚೀಟಿ ದತ್ತಸಂಚಯವನ್ನು ವಿಸ್ತರಿಸಿ ಕುಟುಂಬ ಗುರುತಿನ ಸಂಖ್ಯೆಯನ್ನು ಸೃಜಿಸುವ ಬಗ್ಗೆ ಘೋಷಣೆ ಮಾಡಿತು. ಸದರಿ ವ್ಯವಸ್ಥೆಯನ್ನು ವಸತಿ ಸೌಲಭ್ಯ, ಆರೋಗ್ಯ ವಿಮೆ, ವಿದ್ಯಾರ್ಥಿ ವೇತನ, ವಿವಿಧ ಇಲಾಖಾ ಯೋಜನೆಗಳು, ವಿಧವಾ ವೇತನ ಸೇರಿದಂತೆ ಎಲ್ಲಾ ಸೌಲಭ್ಯಗಳಿಗೂ ಸಹ ವಿಸ್ತರಿಸಲು ಉಪಯೋಗಿಸಲಾಗುವುದು. ಮೇಲೆ ಓದಲಾದ(2)ರ ಆದೇಶದಲ್ಲಿ ಸರ್ಕಾರವು ಕುಟುಂಬ ಗುರುತಿನ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲು ಅನುಮತಿಸಲಾಗಿತ್ತು. ಪ್ರಾಯೋಗಿಕ ಯೋಜನೆಯನ್ನು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನಲ್ಲಿ ಜಾರಿಗೊಳಿಸಲಾಯಿತು.

ಪಡಿತರ ಡೇಟಾಬೇಸ್ ಉಪಯೋಗಿಸಿ ಕುಟುಂಬ ಗುರುತಿನ ಸಂಖ್ಯೆ ಡೇಟಾಬೇಸ್ ಸೃಜಿಸಲಾಗಿದೆ. ರಾಜ್ಯದ ನಿವಾಸಿ ನಾಗರಿಕನ ಪಡಿತರ ಚೀಟಿ ಸಂಖ್ಯೆಯೇ ಕುಟುಂಬ ಗುರುತಿನ ಸಂಖ್ಯೆ. ಸದರಿ ದತ್ತಸಂಚಯವು ವಿವಿಧ ಇಲಾಖೆಗಳು ತಮ್ಮ ಯೋಜನೆ ಜಾರಿಗಾಗಿ ನಿಗದಿತ ಅರ್ಹತಾ ಪರತ್ತುಗಳನ್ವಯ ಬೇಕಾಗುವ ಉದ್ದೇಶಿತ ಫಲಾನುಭವಿ ನಿವಾಸಿಗಳ ಮಾಹಿತಿಗಳ ಗುಣಲಕ್ಷಣಗಳನ್ನು (ಸಾಮಾನ್ಯ ವ್ಯಕ್ತಿಗತ ವಿವರಗಳು) ಹೊಂದಿರುವ ಕೇಂದ್ರೀಕೃತ ದತ್ತಾಂಶ ಕಣಜವಾಗಲಿದ್ದು, ಅರ್ಹತೆ ನಿರ್ವಹಣೆ ವ್ಯವಸ್ಥೆಯಾಗಿ ಅನುಷ್ಠಾನಗೊಳ್ಳುತ್ತದೆ. ಈ ವೇದಿಕೆಯನ್ನು ಇಲ್ಲಿಯವರೆಗೆ ಫಲಾನುಭವಿಗಳಿಗೆ ಆಯ್ಕೆ ಮತ್ತು ಸೌಲಭ್ಯ ವಿತರಣಾ ವ್ಯವಸ್ಥೆಯಲ್ಲಿದ್ದ ಬಹುತೇಕ ಲೋಪದೋಷಗಳನ್ನು ನಿವಾರಿಸುವ ನಿಟ್ಟಿನಲ್ಲಿ ರೂಪಿಸಲಾಗಿದೆ. ಸದರಿ ವ್ಯವಸ್ಥೆಯು ಒಳಗೊಂಡಿರುವ ಕೆಲವು ವಿನೂತನ ಅಂಶಗಳು:

1. ಸರ್ಕಾರದಿಂದ ನೀಡುವ ವಿವಿಧ ಸೌಲಭ್ಯಗಳಿಗಾಗಿ ಫಲಾನುಭವಿಗಳ ಆಯ್ಕೆ ಮತ್ತು ಪಾವತಿ ವಿಧಾನವನ್ನು ಸ್ವಯಂಚಾಲಿತಗೊಳಿಸಲಾಗಿದೆ.

2. ಸದರಿ ವೇದಿಕೆಯು ವಿವಿಧ ಯೋಜನೆಗಳನ್ನು ಪಾರದರ್ಶಕವಾಗಿ ಹಾಗೂ ಸಮರ್ಥವಾಗಿ ಜಾರಿಗೊಳಿಸುವ ಕ್ಷಮತೆ ಹೊಂದಿದೆ.
3. ಫಲಾನುಭವಿಯ ಅರ್ಹತಾ ಪರಿಶೀಲನೆ, ದಾಖಲೀಕರಣ, ದಾಖಲೆ ಸಂರಕ್ಷಣೆ, ಸೌಲಭ್ಯಗಳ ವಿತರಣೆ ಹಾಗೂ ಹಿಂಬಾಲಿಕಾ ಕ್ರಮಗಳಲ್ಲಿ ಮಾನವ ಮಧ್ಯಸ್ಥಿಕೆಯನ್ನು ಕಡಿಮೆಗೊಳಿಸುತ್ತದೆ.
4. ನಾಗರಿಕರಿಂದ ಪದೇ ಪದೇ ದಾಖಲೆಗಳನ್ನು ಮತ್ತು ಪ್ರಮಾಣ ಪತ್ರಗಳನ್ನು ಕೋರುವ ಪದ್ಧತಿಯನ್ನು ತೊಡೆದುಹಾಕುತ್ತದೆ.
5. ಅರ್ಹತೆ ನಿರ್ವಹಣೆ ವ್ಯವಸ್ಥೆಯು ಅರ್ಹ ನಾಗರಿಕರಿಗೆ ಸರ್ಕಾರವು ಪರಿಚಯಿಸುವ ಯೋಜನೆಗಳ ಬಗ್ಗೆ ಸೂಚನೆ ಕೊಡುತ್ತದೆ.
6. ಯಾವುದೇ ಹೊಸ ಯೋಜನೆಯನ್ನು ಪರಿಚಯಿಸಲು, ನಂತರ ಅನುಷ್ಠಾನಗೊಳಿಸಲು ವಿವಿಧ ನಿರ್ಣಯ ಆಧಾರಿತ ವ್ಯವಸ್ಥೆಗಳಿಗೆ ಆಯವ್ಯಯ ಅಂದಾಜಿಸಲು ಸಹಕಾರಿಯಾಗಲಿದೆ.

ಕುಟುಂಬ ಗುರುತಿನ ಯೋಜನೆ ಆಧರಿತ ಅರ್ಹತೆ ನಿರ್ವಹಣೆ ವ್ಯವಸ್ಥೆಯು ಸ್ವಯಂಚಾಲಿತವಾಗಿ ಸರ್ಕಾರವು ತನ್ನ ಸೇವೆ / ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ವಿತರಿಸಲು ಸಹಕಾರಿಯಾಗಲಿದೆ. ಸದರಿ ವ್ಯವಸ್ಥೆಯು ಸೇವಾ ವಿತರಣೆಯಲ್ಲಿ ಪಾರದರ್ಶಕತೆ ಮತ್ತು ಕ್ಷಮತೆ ಹೆಚ್ಚಿಸಿ, ಅರ್ಹ ಫಲಾನುಭವಿಗಳ ಆಯ್ಕೆಯನ್ನು ಖಚಿತಪಡಿಸುತ್ತದೆ. ಸದರಿ ವ್ಯವಸ್ಥೆಯು ಜಾರಿಯಲ್ಲಿರುವ ಯೋಜನೆಗಳ ಅನರ್ಹ ಫಲಾನುಭವಿಗಳ ಗುರುತಿಸಿ ಸರ್ಕಾರಿ ಸೌಲಭ್ಯಗಳ ಸೋರುವಿಕೆ ತಡೆಗಟ್ಟುತ್ತದೆಂದು ನಿರೀಕ್ಷಿಸಿದೆ. ಮುಂದುವರೆದು, ಇಲಾಖೆಗಳಿಗೆ ಹಾಗೂ ನಾಗರಿಕರಿಗೆ ಸೌಲಭ್ಯ ನೀಡುವ ಮತ್ತು ಪಡೆಯುವ ವ್ಯವಹಾರಗಳ ವೆಚ್ಚವನ್ನು ಗಣನೀಯವಾಗಿ ಕಡಿತಗೊಳಿಸುತ್ತದೆ. ನಿವಾಸಿಗಳಿಗೆ ಉತ್ತಮ ಸೇವೆ / ಸೇವೆಯ ರಹದಾರಿ ಒದಗಿಸಿದಂತಾಗುತ್ತದೆ. ಅಲ್ಲದೆ, ಅರ್ಹತೆ ನಿರ್ವಹಣಾ ವ್ಯವಸ್ಥೆಯು ಪಾರದರ್ಶಕತೆ ಹಾಗೂ ಹೊಣೆಗಾರಿಕೆಯನ್ನು ಖಚಿತಪಡಿಸುತ್ತದೆ.

ಇಲಾಖೆಗಳು ತಮ್ಮ ಯೋಜನೆಗಳ/ಸೇವೆ ವಿಸ್ತರಣೆಗಾಗಿ, ಅನುಷ್ಠಾನಕ್ಕಾಗಿ ನಿವಾಸಿಗಳ ಕುಟುಂಬ ಮಾಹಿತಿ ಪಡೆಯಲು ಕುಟುಂಬ ಗುರುತಿನ ಸಂಖ್ಯೆ ಡೇಟಾಬೇಸ್ ಉಪಯೋಗಿಸುವುದರಿಂದ ಎಲ್ಲಾ ಇಲಾಖೆಗಳು ಈಗಾಗಲೇ ಸೌಲಭ್ಯ ಪಡೆದಿರುವ ನಿವಾಸಿಗಳ ಹಾಗೂ ಮುಂದೆ ಅರ್ಜಿ ಸಲ್ಲಿಸುವ ನಾಗರಿಕರಿಂದ ಕುಟುಂಬ ಗುರುತಿನ ಸಂಖ್ಯೆಯನ್ನು ಪಡೆದು ಇಲಾಖಾ ಐ.ಟಿ. ವ್ಯವಸ್ಥೆಗಳಲ್ಲಿ ಸೇರಹಿಡಿಯುವುದು ಅತ್ಯವಶ್ಯವಾಗಿದೆ. ಕುಟುಂಬ ಗುರುತಿನ ಸಂಖ್ಯೆಯನ್ನು ಪಡೆದು ಸಂಯೋಜಿಸುವ ಸಂಪೂರ್ಣ ವಿಧಾನಗಳನ್ನು ಮೇಲೆ ಓದಲಾದ (3) ಮತ್ತು (4)ರ ಸುತ್ತೋಲೆಗಳಲ್ಲಿ ವಿವರಿಸಲಾಗಿದೆ. ಮೇಲೆ ಓದಲಾದ (5)ರ ಆದೇಶದಲ್ಲಿ ಕುಟುಂಬ ಗುರುತಿನ ಸಂಖ್ಯೆ ಯೋಜನೆಗಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಚಾಲನಾ ಸಮಿತಿಯನ್ನು ರಚಿಸಲಾಗಿದೆ.

ಕುಟುಂಬ ಗುರುತಿನ ಸಂಖ್ಯೆ ಇಲ್ಲದ ಯಾವುದೇ ಕರ್ನಾಟಕ ನಿವಾಸಿಗೆ ತನ್ನ ಕುಟುಂಬ ಗುರುತಿನ ಸಂಖ್ಯೆ ಸೃಜಿಸಲು **ಸೇವಾ ಸಿಂಧು** ವೇದಿಕೆಯಲ್ಲಿ ಸೌಲಭ್ಯ ಒದಗಿಸಲಾಗಿದೆ. ಅರ್ಹತೆ ನಿರ್ವಹಣಾ ವ್ಯವಸ್ಥೆಗೆ ಬೇಕಾದ ಹೆಚ್ಚುವರಿ ಮಾಹಿತಿಯನ್ನು ನಿವಾಸಿಯ ಒಪ್ಪಿಗೆಯೊಂದಿಗೆ ಸೇರಹಿಡಿಯಲಾಗುವುದು. ಇಲಾಖೆಗಳು ನಿವಾಸಿಗಳಿಗೆ ಅವರ ಕುಟುಂಬ ಗುರುತಿನ ಸಂಖ್ಯೆ ಇಲ್ಲದಿದ್ದಲ್ಲಿ ಸೃಜಿಸುವಂತೆ ಕೋರಬಹುದು.

ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಮೇಲೆ ಓದಲಾದ (6)ರ ಸಭೆಯಲ್ಲಿ ಅರ್ಹತೆ ನಿರ್ವಹಣೆ ವ್ಯವಸ್ಥೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರದ ಎಲ್ಲಾ ಇಲಾಖೆ / ಏಜೆನ್ಸಿಗಳು ಅವು ನೀಡುವ ಸೇವೆ / ಸೌಲಭ್ಯ / ಯೋಜನೆಗಳಲ್ಲಿ ಕುಟುಂಬ ಗುರುತಿನ ಸಂಖ್ಯೆಯನ್ನು ಸೀಡಿಂಗ್ ಮಾಡುವುದನ್ನು / ಸೇರಹಿಡಿಯುವುದನ್ನು

ಕಡ್ಡಾಯ ಮಾಡಿ ಸರ್ಕಾರಿ ಆದೇಶ ಹೊರಡಿಸಲು ನಿರ್ಣಯಿಸಲಾಯಿತು. ಪ್ರಸ್ತಾವನೆ ಪರಿಶೀಲಿಸಿದೆ-ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 126 ಇಜಿಎಂ 2020,**
**ಬೆಂಗಳೂರು, ದಿನಾಂಕ : 05-12-2020.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಮೇರೆಗೆ ರಾಜ್ಯದ ಎಲ್ಲ ಸರ್ಕಾರಿ ಇಲಾಖೆಗಳು, ನಿಗಮ, ಮಂಡಳಿಗಳು, ಹಾಗೂ ಸ್ವಾಯತ್ತ ಸಂಸ್ಥೆಗಳು ಒದಗಿಸುವ ಸೇವೆ / ಯೋಜನೆಗಳಲ್ಲಿ ಸೇವೆ / ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಸುವ ರಾಜ್ಯದ ನಿವಾಸಿ ನಾಗರಿಕರಿಂದ ಕುಟುಂಬ ಗುರುತಿನ (ಪಡಿತರ ಚೀಟಿ ಸಂಖ್ಯೆ) ಸಂಖ್ಯೆಯನ್ನು ಪಡೆದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ-ಆಡಳಿತ) ಇಲಾಖೆಯು ತಿಳಿಸುವ ವಿಧಾನ / ಪ್ರಕ್ರಿಯೆಯನ್ನ್ಯ ಸೆರೆಹಿಡಿಯಬೇಕೆಂದು ಈ ಮೂಲಕ ಸರ್ಕಾರವು ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 9 ಪಿಆರ್‌ಜೆ 2020, ದಿನಾಂಕ 07.10.2020 ರಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾದ ದತ್ತಾಂಶ ಚಾಲನಾ ಸಮಿತಿಯ ಅನುಮೋದನೆಯಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ-ಆಡಳಿತ) ಇಲಾಖೆಯು ಸರ್ಕಾರಿ ಇಲಾಖೆಗಳು, ನಿಗಮ, ಮಂಡಳಿಗಳು, ಹಾಗೂ ಸ್ವಾಯತ್ತ ಸಂಸ್ಥೆಗಳಿಗೆ ಕುಟುಂಬ ಗುರುತಿನ ಸಂಖ್ಯೆ ಅಳವಡಿಸಿಕೊಳ್ಳಲು ಅನುವಾಗುವಂತೆ ಕಾಲ ಕಾಲಕ್ಕೆ ಅಧಿಸೂಚನೆಗಳನ್ನು ಹೊರಡಿಸುವುದು.

ವಿವಿಧ ಭಾಗೀದಾರರು ಕುಟುಂಬ ಗುರುತಿನ ಸಂಖ್ಯೆ ಅಳವಡಿಸಿಕೊಳ್ಳಲು ಬೇಕಾದ ವಿಧಾನ / ಪ್ರಕ್ರಿಯೆಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ-ಆಡಳಿತ) ಇಲಾಖೆಯು ಕಾಲ ಕಾಲಕ್ಕೆ ಮಾರ್ಗಸೂಚಿ / ನಿರ್ದೇಶನ / ಸುತ್ತೋಲೆ / ಸರ್ಕಾರಿ ಆದೇಶಗಳನ್ನು ಹೊರಡಿಸುವುದು. ಎಲ್ಲ ಸರ್ಕಾರಿ ಇಲಾಖೆಗಳು, ನಿಗಮ, ಮಂಡಳಿಗಳು, ಹಾಗೂ ಸ್ವಾಯತ್ತ ಸಂಸ್ಥೆಗಳು ಕುಟುಂಬ ಗುರುತಿನ ಸಂಖ್ಯೆಯನ್ನು ಅಳವಡಿಸಿಕೊಳ್ಳಲು ಇವುಗಳನ್ನು ಅವಶ್ಯವಾಗಿ ತಪ್ಪದೇ ಅನುಸರಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

R.

**(ಆರ್. ಶಾಂತಿ)**
ಪೀಠಾಧಿಕಾರಿ-3
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ (ಇ-ಆಡಳಿತ)

**ಇವರಿಗೆ**:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು-ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಅದರ 50 ಪ್ರತಿಗಳನ್ನು ಈ ಇಲಾಖೆಗೆ ಒದಗಿಸುವಂತೆ ಕೋರಲಾಗಿದೆ.

ಪ್ರತಿ:

1. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಎಲ್ಲಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ವಿಧಾನಸೌಧ / ವಿಕಾಸಸೌಧ / ಬಹುಮಹಡಿಗಳ ಕಟ್ಟಡ, ಬೆಂಗಳೂರು.

6. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ – ಸಂಬಂಧಪಟ್ಟ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಇವರ ಮುಖಾಂತರ
7. ಎಲ್ಲಾ ನಿಗಮ / ಮಂಡಳಿ / ಸ್ವಾಯತ್ತ ಸಂಸ್ಥೆಗಳು – ಸಂಬಂಧಪಟ್ಟ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಇವರ ಮುಖಾಂತರ
8. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್- ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರ ಮುಖಾಂತರ
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು
13. ಶಾಖಾ ರಕ್ಷ ಕಡತ.

**File No.DPAR/126/EGM/2020-DESK1-dparegovsec**

# PROCEEDINGS OF THE GOVERNMENT OF KARNATAKA

**Sub:** Capturing the Family ID (Ration Card Number) from the applicants who are domicile residents of Karnataka and are applying for services/benefits from Government of Karnataka - reg

**Read:**
1. Para 146 of the Budget 2018-2019 presented on 05th July 2018
2. Government Order No DPAR 254 EGV 2019, dated 28th August 2019
3. Government Circular No DPAR 126 EGM 2020, dated 29th May 2020
4. Government Circular No DPAR 126 EGM 2020, dated 18th Sep 2020
5. Government Order No. DPAR 9 PRJ 2020, dated: 7th Oct 2020
6. Proceedings of the meeting on Family ID Project under the chairmanship of Hon'ble Chief Minister of Karnataka held on 19.11.20

## PREAMBLE

Government in its Budget Speech read at (1) above announced that in order to enable citizens to get benefits of different programs or subsidies automatically without submission of application, a Family ID will be created by extending Public Distribution System (PDS) data bank to provide different family oriented facilities under the Entitlement Management System. This system would be used for all schemes like extending housing facility, Health insurance, student scholarship, programmes of different departments, widow pension etc. In the Government Order read at (2) above, Government approved the Family ID project to be implemented on pilot basis. The pilot of the project was implemented in Shrirangapatna taluka of Mandya district.

The Family ID database has been created using the PDS database. The Ration Card ID of the resident is the Family ID. This database would become centralized repository of attributes of residents that are required by various departments to identify its target beneficiaries, determine their eligibility and extend their services / benefits to the eligible beneficiaries thus enabling implementation of the Entitlement Management System (EMS). This platform has been designed to overcome various limitations existing in the current system for selection and disbursement of benefits to the citizens. The innovative features enabled by this system are:

1. Automation of the process for selection of beneficiaries and payment under various schemes provided by government.
2. The platform takes care of proper implementation of different schemes in a transparent and efficient way.
3. The manual interventions needed on various activities like eligibility check, documentation, record keeping, disbursement of benefits and its tracking gets reduced
4. It obviates the need of asking documents and certificates from citizens repeatedly
5. Alerts to citizens who are eligible for the schemes introduced by the Govt. to be provided by the EMS
6. To aid various Decision Support systems to estimate budget for any new scheme during its introduction, and subsequent implementation.

Family ID database based EMS would enable government to suo moto deliver services / benefits to eligible beneficiaries. This will bring in efficiency and effectiveness in service delivery and ensure inclusion of eligible citizens. It is also expected to identify the ineligible beneficiaries in existing scheme and thus avoid dissipation of benefits. Further, the transactions costs for both departments and citizens for delivery and seeking of benefits would be reduced significantly. Residents would be provided with better services / access to service. Additionally, EMS will also ensure transparency and accountability.

It is essential that all departments capture the Family ID of the resident who has already got benefits or is applying to the Government as the Family ID of the resident would be used by the departments to fetch the information required from Family ID database to implement its schemes/extend its services/ benefits. The process for capturing the Family ID of the applicant has been detailed in the Government circulars read at (3) and (4) above. Vide Government Order read at (5) above a Steering Committee under the chairmanship of Additional Chief Secretary to Government of Karnataka has been constituted for Family ID project.

The Seva Sindhu portal facilitates creation of a Family Id (Ration Card) for any family resident in Karnataka who don't have the same. The additional data required for EMS would also be captured with resident's consent. The Department may ask resident to generate their Family Id if they don't have one.

In the meeting held under the chairmanship of Hon'ble Chief Minister read at (5) above it was decided to issue a GO to mandate capture/ seeding of Family ID in all schemes/services/benefits given by all State Government Departments/ Agencies for effective implementation of EMS. The proposal has been examined and hence this order

## GOVERNMENT ORDER NO: DPAR 126 EGM 2020, BANGALORE, DATED:05-12-2020

For the reasons explained in the Preamble above, Government hereby directs all Government Departments, Boards, Corporations and Autonomous Bodies to capture Family ID (Ration Card number) of domicile residents applying to avail the benefits or seeking services from the Government as per the procedure / process laid out by Department of Personnel and Administrative Reforms (e-Governance).

The Department of Personnel and Administrative Reforms (e-Governance) from time to time with the approval of Steering Committee under the chairmanship of Additional Chief Secretary, Government of Karnataka constituted vide GO No. DPAR 9 PRJ 2020, dated: 7th October 2020 would issue notification under this Government Order enabling Government Departments, Boards, Corporations and Autonomous Bodies to adopt Family ID.

The Department of Personnel and Administrative Reforms (e-Governance) from time to time in the form of guidelines / Directions / Circular / Government Order / Notifications may issues procedure / process to be followed by various stakeholders in

adopting Family ID. All Government Departments, Boards, Corporations and Autonomous Bodies to adopt Family ID shall necessarily follow them without fail.

By order and in the name of the
Governor of Karnataka
R. [signature]
(Shanthi.R)
Desk Officer-3
Department of Personnel and
Administrative Reforms (e-Governance)

To:
The Compiler, Karnataka Gazette for publication in the next issue of the Special Gazette and supply 50 copies to this Department.

Copy to:

1. The Chief Secretary to Government, Vidhana Soudha, Bengaluru.
2. The Additional Chief Secretary to Government to Chief Minister, Vidhana Soudha, Bengaluru.
3. The Additional Chief Secretary to Government and Development Commissioner, Vidhana Soudha, Bengaluru
4. The Additional Chief Secretary to Government, Vidhana Soudhan, Bengaluru.
5. All the Additional Chief Secretary / Principal Secretary / Secretary to Government, Vidhana Soudha / Vikasa Soudha, M.S. Building, Bengaluru.
6. All the Heads of Department- through the concerned Additional Chief Secretary / Principal Secretary / Secretary to Government
7. All Boards / Corporations/ Autonomous bodies - through the concerned Additional Chief Secretary / Principal Secretary / Secretary to Government
8. The Chief Executive Officer, Centre for e-Governance, M.S. Building, Bengaluru
9. All the Deputy Commissioners / Chief Executive Officers, Zilla Panchayat- through the Chief Executive Officer, Centre for e-Governance.
10. The Private Secretary to Additional Chief Secretary to Government, Department of Personnel and Administrative Reforms (e-Governance).
11. The Personal Assistant to Additional Secretary to Government, Department of Personnel and Administrative Reforms (e-Governance).
12. For publication in Departmental website.
13. Section guard file.